# ಕರ್ನಾಟಕ ವಿಧಾನ ಪರಿಷತ್ತು

1. **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1854**
2. **ಮಾನ್ಯ ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು**
3. **ಉತ್ತರಿಸಬೇಕಾದ ದಿನಾಂಕ : 15.03.2022**
4. **ಉತ್ತರಿಸುವ ಸಚಿವರು : ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿ, ಬೀದರ್, ಯಾದಗಿರಿ, ಬಿಜಾಪೂರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಸರ್ಕಾರಿ, ಸಹಕಾರಿ ಸ್ವಾಮ್ಯದ ಮತ್ತು ಖಾಸಗಿ ಸಕ್ಕರೆ ಕಾರ್ಖಾನೆಗಳೆಷ್ಟು;(ಸಂಪೂರ್ಣ ಮಾಹಿತಿ ನೀಡುವುದು) | ಕಲಬುರಗಿಯಲ್ಲಿ 3 , ಬೀದರ್‌ನಲ್ಲಿ 6 , ಯಾದಗಿರಿಯಲ್ಲಿ 1, ವಿಜಯಪುರದಲ್ಲಿ 9 ಮತ್ತು ಬಾಗಲಕೋಟೆಯಲ್ಲಿ 12, ಹೀಗೆ ಒಟ್ಟು 31 ಸಕ್ಕರೆ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿವೆ. ಜಿಲ್ಲಾವಾರು ಕಾರ್ಖಾನೆಗಳ ವಿವರಗಳನ್ನು **ಅನುಬಂಧದಲ್ಲಿ -1** ರಲ್ಲಿ ಒದಗಿಸಿದೆ. |
| (ಆ) | ಸದರಿ ಜಿಲ್ಲೆಗಳ ಕಬ್ಬು ಬೆಳೆಗಾರರು ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿ ವರ್ಷಗಳೇ ಗತಿಸಿದರೂ ಕಾರ್ಖಾನೆಗಳು ರೈತರಿಗೆ ಹಣ ಪಾವತಿಸದ ಕಾರಣ ರೈತರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸದರಿ ಜಿಲ್ಲೆಗಳಲ್ಲಿನ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ 2018-19 ನೇ ಹಂಗಾಮ ಅನ್ನು ಹೊರತುಪಡಿಸಿ, 2020-21ನೇ ಹಂಗಾಮಿನವರೆಗೆ ಕಬ್ಬಿನ ಬಿಲ್ಲನ್ನು ಪೂರ್ಣವಾಗಿ ಪಾವತಿಸಿರುತ್ತವೆ ಮತ್ತು ಯಾವುದೇ ಬಾಕಿ ಉಳಿಸಿಕೊಂಡಿರುವುದಿಲ್ಲ.<br>2018-19ನೇ ಹಂಗಾಮಿನಲ್ಲಿ 4 ಸಕ್ಕರೆ ಕಾರ್ಖಾನೆಗಳಿಂದ ಒಟ್ಟು ರೂ.8.93 ಕೋಟಿಗಳಷ್ಟು ಕಬ್ಬು ಬಿಲ್ಲು ಬಾಕಿ ಇರುತ್ತದೆ. ಕಾರ್ಖಾನೆವಾರು ಬಾಕಿ ವಿವರ ಈ ಕೆಳಕಂಡಂತಿದೆ. |

| ವರ್ಷ | ಕ್ರ.ಸಂ. | ಕಾರ್ಖಾನೆಯ ಹೆಸರು | ಬಾಕಿಯಿರುವ ಮೊತ್ತ (ರೂ.ಕೋಟಿಗಳಲ್ಲಿ) |
|---|---|---|---|
| 2018-19 | 1. | ಬೀದರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಳ್ಳಿಖೇಡ್, ಹುಮನಾಬಾದ ತಾಲ್ಲೂಕು, ಬೀದರ್ ಜಿಲ್ಲೆ | 0.89 |
| | 2. | ಭವಾನಿ ಶುಗರ್ಸ್ ಲಿ., ಬರೂರ, ಬೀದರ್ ಜಿಲ್ಲೆ | 1.80 |
| | 3. | ಸಾವರೀನ್ ಇಂಡಸ್ಟ್ರೀಸ್ ಲಿ., ತೇರದಾಳ, ಮಖಂಡಿ ತಾಲ್ಲೂಕು, ಬಾಗಲಕೋಟ ಜಿಲ್ಲೆ | 4.99 |
| | 4. | ಧ್ಯಾನಯೋಗಿ ಶಿವಕುಮಾರ ಸ್ವಾಮೀಜಿ ಶುಗರ್ಸ್ ಲಿ., ಇಂಡಿ, ವಿಜಯಪುರ ಜಿಲ್ಲೆ | 1.25 |
| | | ಒಟ್ಟು | 8.93 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಇ) | ಬಂದಿದ್ದಲ್ಲಿ, ಎಷ್ಟು ರೈತರು ಕಾರ್ಖಾನೆಗಳಿಗೆ ಎಷ್ಟು ಟನ್ ಕಬ್ಬು ಸರಬರಾಜು ಮಾಡಿದ್ದಾರೆ;(ಕಾರ್ಖಾನೆವಾರು ವಿವರವಾದ ಮಾಹಿತಿ ನೀಡುವುದು) | 202-21 ಮತ್ತು 2021-22ನೇ ಸಾಲುಗಳಲ್ಲಿ ರೈತರು ಸರಬರಾಜು ಮಾಡಿದ ಕಬ್ಬನ್ನು ಕಾರ್ಖಾನೆಗಳು ಪೂರ್ಣವಾಗಿ ಅರೆದಿದ್ದು, ಅರೆದಿರುವ ಕಬ್ಬಿನ ಪ್ರಮಾಣದ ವಿವರಗಳನ್ನು ಕಾರ್ಖಾನೆವಾರು **ಅನುಬಂಧ-1** ರಲ್ಲಿ ಒದಗಿಸಿದೆ. |

.....2

| | | |
|---|---|---|
| (ಈ) | ರೈತರು ಕಬ್ಬು ಸರಬರಾಜು ಮಾಡಿದ್ದರೂ ಕಾರ್ಖಾನೆಗಳು ಬಿಲ್ಲು ಪಾವತಿಸದಿರುವುದಕ್ಕೆ ಕಾರಣವೇನು;ಕಾರ್ಖಾನೆಗಳು ಸರ್ಕಾರದ ಹತೋಟಿಯಲ್ಲಿವೆಯೇ; | 2016-17, 2017-18 ಮತ್ತು 2020-21 ನೇ ಹಂಗಾಮುಗಳಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಸಕ್ಕರೆ ಕಾರ್ಖಾನೆಗಳು ಕಬ್ಬು ಬಿಲ್ಲು ಮೊತ್ತವನ್ನು ಪೂರ್ಣವಾಗಿ ತಿರುವಳಿ ಮಾಡಿರುತ್ತವೆ. ಆದ್ದರಿಂದ ಈ ಸಾಲುಗಳಲ್ಲಿ ಯಾವುದೇ ಬಾಕಿ ಇರುವುದಿಲ್ಲ.<br><br>2018-19ನೇ ಸಾಲಿನಲ್ಲಿ ಬಾಕಿ ಉಳಿಸಿ ಕೊಂಡಿರುವ ಮೇಲ್ಕಂಡ ನಾಲ್ಕು ಕಾರ್ಖಾನೆಗಳ ವಿರುದ್ಧ ವಸೂಲಾತಿ ಪ್ರಮಾಣ ಪತ್ರವನ್ನು ಹೊರಡಿಸಿ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಆದಾಗ್ಯೂ, ಕಬ್ಬು ಬಿಲ್ಲು ಪಾವತಿಸದೇ ಇರುವುದರಿಂದ ಈ ನಾಲ್ಕು ಕಾರ್ಖಾನೆಗಳ ಚರ ಮತ್ತು ಸ್ಥಿರಾಸ್ತಿಗಳನ್ನು ಹರಾಜು ಪ್ರಕ್ರಿಯೆಗೆ ಒಳಪಡಿಸಿ ಕಬ್ಬು ಬಿಲ್ಲು ವಸೂಲಾತಿಗೆ ಸೂಕ್ತ ಕ್ರಮಕೈಗೊಳ್ಳುವಂತೆ ಅಂದಿನ ಮಾನ್ಯ ಪೌರಾಡಳಿತ ಮತ್ತು ಸಕ್ಕರೆ ಸಚಿವರ ದಿನಾಂಕ:09.06.2021ರ ಪತ್ರದಲ್ಲಿ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿತ್ತು. ಈ ಕಾರ್ಖಾನೆಗಳು ಕಳೆದ ಮೂರು ಹಂಗಾಮುಗಳಿಂದ ಕಬ್ಬು ಅರೆಯುವ ಕಾರ್ಯವನ್ನು ಸ್ಥಗಿತಗೊಳಿಸಿರುವುದರಿಂದ ಕಾರ್ಖಾನೆಗಳಿಗೆ ಯಾವುದೇ ಆದಾಯದ ಮೂಲಗಳು ಇರುವುದಿಲ್ಲ. ಆದ್ದರಿಂದ ಕಬ್ಬು ಬಿಲ್ಲು ವಸೂಲು ಮಾಡುವಲ್ಲಿ ವಿಳಂಬವಾಗಿರುತ್ತದೆ. ಆದಾಗ್ಯೂ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಬಾಕಿ ವಸೂಲಾತಿಗೆ ಕ್ರಮವಹಿಸಿದ್ದು, ವಸೂಲಾತಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br><br>2021-22ನೇ ಹಂಗಾಮಿನಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ದಿನಾಂಕ: 28.02.2022ರಲ್ಲಿದ್ದಂತೆ ಪಾವತಿಸಬೇಕಾದ ಕಬ್ಬು ಬಿಲ್ಲು ಮೊತ್ತ ರೂ.17,173.81 ಕೋಟಿಗಳಷ್ಟಿದ್ದು, ಈ ಪೈಕಿ ರೂ.13,296.82 ಕೋಟಿಗಳನ್ನು ಪಾವತಿಸಿರುತ್ತವೆ. ಇನ್ನೂ ರೂ.3,878.39 ಕೋಟಿಗಳಷ್ಟು ಬಾಕಿ ಇರುತ್ತದೆ. ಪಾವತಿ ಪ್ರಮಾಣವು ಶೇ.77 ರಷ್ಟಿರುತ್ತದೆ. ಕೆಲವು ಕಾರ್ಖಾನೆಗಳು ಕೇಂದ್ರ ಸರ್ಕಾರ ನಿಗದಿಪಡಿಸಿರುವ ಎಫ್.ಆರ್.ಪಿ. ದರಕ್ಕೂ ಮೇಲ್ಪಟ್ಟು ಕಬ್ಬು ಬಿಲ್ಲನ್ನು ಪಾವತಿಸಿರುತ್ತವೆ.<br><br>ಸಕ್ಕರೆ ಕಾರ್ಖಾನೆಗಳು ಬಾಕಿ ಉಳಿಸಿಕೊಂಡಿರುವ ಮೊತ್ತವನ್ನು ಭೂಕಂದಾಯ ಬಾಕಿ ಎಂದು ಪರಿಗಣಿಸಿ ಏಕೆ ವಸೂಲಿ ಮಾಡಬಾರದು ಎಂದು ಕಬ್ಬು ನಿಯಂತ್ರಣ ಆದೇಶ, 1966ರ ಕಲಂ 3(3) ರನ್ವಯ ದಿನಾಂಕ:14.01.2022 ರಂದು ಶಾಸನಬದ್ಧ ನೋಟೀಸುಗಳನ್ನು ಜಾರಿಗೊಳಿಸಲಾಗಿದೆ. ಪ್ರಸ್ತುತ ಹಂಗಾಮು ಚಾಲನೆಯಲ್ಲಿರುವುದರಿಂದ ಕಾರ್ಖಾನೆಗಳು ರೈತರ ಕಬ್ಬು ಬಿಲ್ಲು ಬಾಕಿ ಮೊತ್ತವನ್ನು ಪಾವತಿಸಲು ಅವಕಾಶಗಳಿರುತ್ತವೆ. |
| (ಉ) | ಕಾರ್ಖಾನೆಗಳಿಂದ ರೈತರಿಗೆ ಪ್ರತಿ ಟನ್ ಕಬ್ಬಿಗೆ ಎಷ್ಟು ಹಣ ಪಾವತಿಸಲಾಗುತ್ತಿದೆ: ರೈತರು ಕಬ್ಬು ಸರಬರಾಜು ಮಾಡಿದ ನಂತರ ಕಾರ್ಖಾನೆಯವರಿಂದ ಎಷ್ಟು ಕಂತುಗಳಲ್ಲಿ ಹಣ ಪಾವತಿಸಲಾಗುತ್ತಿದೆ: | 2021-22ನೇ ಸಾಲಿನಲ್ಲಿ ಕಾರ್ಖಾನೆಗಳಿಗೆ ಸರಬರಾಜಾಗುವ ಕಬ್ಬಿಗೆ ಮೊದಲನೇ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು (ಎಫ್‌ಆರ್‌ಪಿ) ಕೇಂದ್ರ ಸರ್ಕಾರವು ದಿನಾಂಕ: 31.08.2021 ರಂದು ಘೋಷಿಸಿರುತ್ತದೆ. ಆ ಪ್ರಕಾರವಾಗಿ ಶೇ.9.5 ಮತ್ತು ಅದಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಮೆ. ಟನ್‌ಗೆ ರೂ.2755/- ಹಾಗೂ ಶೇ.10 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಮೆ. ಟನ್ ಒಂದಕ್ಕೆ ರೂ.2900/- ಗಳಷ್ಟು ನಿಗದಿಗೊಳಿಸಲಾಗಿದೆ. |

| | | |
|---|---|---|
| | (ವಿವರವಾದ ಮೊತ್ತದೊಂದಿಗೆ ಮಾಹಿತಿ ನೀಡುವುದು) | ಶೇ.10 ರ ನಂತರದ ಪ್ರತಿ ಶೇ.1 ರಷ್ಟು ಇಳುವರಿಗೆ ಪ್ರತಿ ಮೆ.ಟನ್ ಒಂದಕ್ಕೆ ರೂ.290/- ರಂತೆ ಹೆಚ್ಚುವರಿ ಬೆಲೆ ನಿಗದಿಗೊಳಿಸಲಾಗಿದೆ. ಈ ಆಧಾರದ ಮೇಲೆ ರಾಜ್ಯದ ಕಾರ್ಖಾನೆಗಳು ನುರಿಸುವ ಪ್ರತಿ ಮೆ.ಟನ್ ಕಬ್ಬಿಗೆ ರೈತರಿಗೆ ಪಾವತಿಸಬೇಕಾದ ಎಫ್.ಆರ್.ಪಿ. ದರವನ್ನು ನಿಗದಿಗೊಳಿಸಿ ದಿನಾಂಕ 29.10.2021 ರಂದು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದಿಂದ ಆದೇಶ ಹೊರಡಿಸಲಾಗಿದೆ.<br><br>ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಎಫ್.ಆರ್.ಪಿ ದರವನ್ನು ಏಕ ಕಂತಿನಲ್ಲಿ ಪಾವತಿಸಬೇಕೆಂಬ ನಿಯಮವಿರುತ್ತದೆ. ಕಾರ್ಖಾನೆವಾರು ಪಾವತಿಸಬೇಕಾದ ಎಫ್.ಆರ್.ಪಿ . ದರದ ವಿವರಗಳನ್ನು **ಅನುಬಂಧ-2 ರಲ್ಲಿ** ಒದಗಿಸಿದೆ. |
| (ಊ) | ಕಬ್ಬು ಸರಬರಾಜು ಮಾಡಿದ ರೈತರಿಗೆ ಬಾಕಿ ಹಣ ಪಾವತಿಸದ ಕಾರ್ಖಾನೆಗಳಿಗೆ ಸರ್ಕಾರ ಕೈಗೊಂಡ ಕ್ರಮಗಳೇನು;(ವಿವರವಾದ ಮಾಹಿತಿ ನೀಡುವುದು) | 2018-19ನೇ ಸಾಲಿನಲ್ಲಿ ಬಾಕಿ ಉಳಿಸಿ ಕೊಂಡಿರುವ ಮೇಲ್ಕಂಡ ನಾಲ್ಕು ಕಾರ್ಖಾನೆಗಳ ವಿರುದ್ಧ ವಸೂಲಾತಿ ಪ್ರಮಾಣ ಪತ್ರವನ್ನು ಹೊರಡಿಸಿ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಆದಾಗ್ಯೂ, ಕಬ್ಬು ಬಿಲ್ಲು ಪಾವತಿಸದೇ ಇರುವುದರಿಂದ ಈ ನಾಲ್ಕು ಕಾರ್ಖಾನೆಗಳ ಚರ ಮತ್ತು ಸ್ಥಿರಾಸ್ತಿಗಳನ್ನು ಹರಾಜು ಪ್ರಕ್ರಿಯೆಗೆ ಒಳಪಡಿಸಿ ಕಬ್ಬು ಬಿಲ್ಲು ವಸೂಲಾತಿಗೆ ಸೂಕ್ತ ಕ್ರಮಕೈಗೊಳ್ಳುವಂತೆ ಅಂದಿನ ಮಾನ್ಯ ಪೌರಾಡಳಿತ ಮತ್ತು ಸಕ್ಕರೆ ಸಚಿವರ ದಿನಾಂಕ:09.06.2021ರ ಪತ್ರದಲ್ಲಿ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿತ್ತು. ಈ ಕಾರ್ಖಾನೆಗಳು ಕಳೆದ ಮೂರು ಹಂಗಾಮುಗಳಿಂದ ಕಬ್ಬು ಅರೆಯುವ ಕಾರ್ಯವನ್ನು ಸ್ಥಗಿತಗೊಳಿಸಿರುವುದರಿಂದ ಕಾರ್ಖಾನೆಗಳಿಗೆ ಯಾವುದೇ ಆದಾಯದ ಮೂಲಗಳು ಇರುವುದಿಲ್ಲ. ಆದ್ದರಿಂದ ಕಬ್ಬು ಬಿಲ್ಲು ವಸೂಲು ಮಾಡುವಲ್ಲಿ ವಿಳಂಬವಾಗಿರುತ್ತದೆ. ಆದಾಗ್ಯೂ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಬಾಕಿ ವಸೂಲಾತಿಗೆ ಕ್ರಮವಹಿಸಿದ್ದು, ವಸೂಲಾತಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| (ಋ) | ರಾಜ್ಯದಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆ ಪರವಾನಗಿ ಕೊಟ್ಟಿದ್ದು ಎಷ್ಟು: ಇದರಲ್ಲಿ ಇಥೆನೈಲ ಎಷ್ಟು? | ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆ ಸ್ಥಾಪನೆ ಸಂಬಂಧ ಒಟ್ಟು 18 ಪ್ರಸ್ತಾವನೆಗಳು ಬಂದಿರುತ್ತವೆ. ಈ ಪೈಕಿ ಈವರೆಗೆ 5 ಸಕ್ಕರೆ ಕಾರ್ಖಾನೆಗಳಿಗೆ ಕೇಂದ್ರ ಸರ್ಕಾರವು ಐ.ಇ.ಎಂ. ನೀಡಿದ್ದು, ಈ ಐದು ಘಟಕಗಳು ಎಥನಾಲ್ ಉತ್ಪಾದನೆಗೆ ಅನುಮತಿ ಪಡೆದಿರುತ್ತವೆ.<br><br>ರಾಜ್ಯದಲ್ಲಿ ಪ್ರಸ್ತುತ 32 ಸಕ್ಕರೆ ಕಾರ್ಖಾನೆಗಳು ಎಥನಾಲ್ ಉತ್ಪಾದಿಸುತ್ತಿವೆ. ಇದಲ್ಲದೆ, 68 ಹೊಸ ಎಥನಾಲ್ ಘಟಕಗಳ ಸ್ಥಾಪನೆ / ಹಾಲಿ ಇರುವ ಎಥನಾಲ್ ಘಟಕಗಳ ಸಾಮರ್ಥ್ಯ ವಿಸ್ತರಣೆಗೆ ಕೇಂದ್ರ ಸರ್ಕಾರದಿಂದ ತಾತ್ವಿಕ ಅನುಮೋದನೆ ನೀಡಲಾಗಿದೆ. |

ಸಂಖ್ಯೆ: ಸಿಐ 39 ಎಸ್‌ಜಿಎಫ್ 2022

(ಶಂಕರ.ಬ.ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

ಅನುಬಂಧ - 1

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸುನಿಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1854ಕ್ಕೆ ಅನುಬಂಧ

| SL. NO | Name of the factory | Total cane crushed (in MTs) 2021-22 | Total cane crushed (in MTs) 2020-21 |
|---|---|---|---|
| | **BAGALKOTE DISTRICT** | | |
| 1 | BADAMI SUGARS LTD., MUSTIGERI, BADAMI TQ, BAGALKOTE DISTRICT. | 163362 | Not crushed |
| 2 | BILAGI SUGAR MILL LTD., BILAGI TQ. BAGALKOTE DIST. | 1265783 | 957716 |
| 3 | EID PARRY (INDIA) LTD., NAGARAL, NAINEGALI, BAGALKOT TQ. & DIST. | 710400 | 520689 |
| 4 | GEM SUGARS LTD., BILAGI TQ. BAGALKOTE DIST. | 786246 | 577758 |
| 5 | GODAVARI SUGARS LTD., MUDHOL TQ. BAGALKOTE DIST. | 1782500 | 2002849 |
| 6 | INDIAN CANE POWER LTD MUDHOL TQ. BAGALKOTE DIST. | 2403138 | 2014850 |
| 7 | JAMAKHANDI SUGARS LTD., HIREPADASALAGI, JAMKHANDI TQ. BAGALKOTE DIST. | 1225759 | 671946 |
| 8 | MRN CANE POWER , KALLAPUR, DIST:BAGALKOTE | 584452 | 476113 |
| ~~9~~ | ~~NIRANI SUGARS LTD., MUDHOL TQ. BAGALKOTE DIST.~~ | ~~2198407~~ | ~~1758542~~ |
| 10 | PRABULINGESHWARA SUGARS LTD., JAMKHANDI TQ. BAGALKOTE DIST. | 1454230 | 1176815 |
| 11 | SHREE KEDHARNATHA SUGARS AND AGRO PRODUCTS LTD, KERAKALAMATTI, BADAMI TQ,BAGALKOT DIST | 250932 | Not crushed |
| 12 | SHRI SAI PRIYA SUGARS LTD., HIPPARAGI-MYGUR JAMKHANDI TQ, BAGALKOT DIST. | 1827933 | 1444120 |
| | TOTAL | 14653142 | 11601398 |
| | **BIDAR DISTRICT** | | |
| 1 | BHALKESHWAR SUGARS LTD, BAJOLAGA, BHALKI TQ., BIDAR DIST. | 415520 | 421681 |
| 2 | BIDAR KISSAN SHAKKAR KARKHANA LTD., MOGDAL VILLAGE, NATIONAL HIGHWAY NO.9, BIDAR TQ & DIST | 369084 | 222020 |
| 3 | BIDAR SSK LTD HALLIKHED, HUMNABAD TQ,BIDAR DIST | 54574 | Not crushed |
| 4 | MAHATHMA GANDHI SSK LTD., BHALKI TQ. BIDAR DIST. | 380921 | 323232 |
| 5 | NARANJA SSK LTD., BIDAR TQ & DIST. | 307378 | 252741 |
| 6 | SHREE BHAVANI SUGARS, (LEASEE of Bhavani khandsari sugars Ltd) BAROOR, BIDAR TQ. BIDAR DIST. | 42718 | Not crushed |
| | TOTAL | 1570195 | 1219674 |
| | **KALABURGI DISTRICT** | | |
| 1 | RENUKA SUGAR S LTD., HAVALAGA, AFZALPURA TQ. KALABURGI DISTRICT | 1043060 | 612982 |
| 2 | NSL SUGARS (LESSEE OF ALAND SSK ) BHOOSANUR, KALABURGI DISTRICT | 742873 | 418038 |
| 3 | UGAR SUGARS LTD., JEWARGI TQ. KALABURGI DISTRICT | 383100 | 340075 |
| | TOTAL | 2169033 | 1371095 |

| | VIJAYAPURA DISTRICT | | |
|---|---|---|---|
| 1 | INDIAN SUGAR MANUFACTURING CO. LTD. INDI TQ. VIJAYAPURA DISTRICT | 396010 | 297562 |
| 2 | JAMKHANDI SUGARS LTD., UNIT-2, NAD KD. INDI TQ. VIJAYAPURA DISTRICT | 558937 | 440813 |
| 3 | KPR SUGAR MILL PVT LTD., SINDAGI TALUK, VIJAYAPURA DISTRICT | 1207649 | 1074345 |
| 4 | MANALI SUGARS LTD., MALAGHAN, SINDAGI TQ, VIJAYAPURA DISTRICT | 327426 | 266740 |
| 5 | NANDI SSK LTD., VIJAYAPURA DISTRICT | 758105 | 647564 |
| 6 | SANGAMNATH SUGARS LTD.,YERAGAL B. K. SINDAGI TQ, VIJAYAPURA DIST. | 395281 | Not crushed |
| 7 | SHREE BALAJI SUGARS & CHEMICAL PVT. LTD., YARAGAL, VIJAYAPURA DISTRICT. | 921008 | 656954 |
| 8 | SHREE BASAVESHWARA SUGARS LTD., KARJOL VIJAYAPURA DISTRICT. | 830348 | 575379 |
| 9 | SHREE BHIMASHANKAR SAHAKARI SAKKARE KARKHANE NIYAMIT, MARGUR, INDI TQ, VIJAYAPUR DIST. | 462995 | 403501 |
| | **TOTAL** | **5857759** | **4362858** |
| | **YADAGIRI DISTRICT** | | |
| 1 | COREGREEN SUGAR & FUELS PVT. LTD. SHAHAPURA, TQ. YADAGIRI DIST. | 484690 | 342880 |
| | **TOTAL** | **484690** | **342880** |
| | **GRAND TOTAL** | **24734819** | **18897905** |

**COMMISSIONER FOR CANE DEVELOPMENT**
**AND DIRECTOR OF SUGAR**

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1854ಕ್ಕೆ ಅನುಬಂಧ-2


ಆಯುಕ್ತರು
ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು

ಕರ್ನಾಟಕ ಸರ್ಕಾರ

5ನೇ ಮಹಡಿ, ಎಫ್ ಬ್ಲಾಕ್, ಸಿಬಿಬಿ ಸಂಕೀರ್ಣ, ಕೆಜಿಬಿ ಕಟ್ಟಡ,
ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009
ದೂರವಾಣಿ: 080-22133390/22133392 ಫ್ಯಾಕ್ಸ್: 080-22133391
ಇಮೇಲ್: canecommissioner@gmail.com
ವೆಬ್‌ಸೈಟ್: www.canecommissionarate.karnataka.gov.in


ವಿಷಯ:-2020-21ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯ ಆಧಾರದ ಮೇಲೆ 2021-22ನೇ ಸಾಲಿಗೆ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯ ಮತ್ತು ಲಾಭದಾಯಕ ಬೆಲೆ (Fair and Remunerative Price) ಪ್ರಕಟಣೆಯ ಕುರಿತು.

ಉಲ್ಲೇಖ:-ಗ್ರಾಹಕ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಕೃಷಿ ಭವನ, ನವದೆಹಲಿ ಇವರ ಪತ್ರ ಸಂ: 3(4)/2020-ಎಸ್‌ಪಿ I ದಿನಾಂಕ 31.08.2021

—*—

**ಪೀಠಿಕೆ:**

ಕೇಂದ್ರ ಸರ್ಕಾರವು ಉಲ್ಲೇಖ (1) ರಂತೆ 2021-22ನೇ ಸಕ್ಕರೆ ಹಂಗಾಮಿಗೆ ಈ ಕೆಳಗಿನಂತೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ನಿಗದಿಪಡಿಸಿದೆ.

1. ಶೇಕಡ 10.00 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಮೆಟ್ರಿಕ್ ಟನ್ ಕಬ್ಬಿಗೆ ರೂ.2900/-
2. ಶೇಕಡ 10.00 ಕ್ಕೆ ಮೇಲ್ಪಟ್ಟು ಇಳುವರಿಗೆ ನಂತರದ ಶೇಕಡ 1 ರಷ್ಟು ಇಳುವರಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.290/- ರಂತೆ ಹೆಚ್ಚುವರಿ ಬೆಲೆ.
3. ಶೇಕಡ 10.00 ಕ್ಕಿಂತ ಕಡಿಮೆ ಹಾಗೂ ಶೇಕಡ 9.5ಕ್ಕೆ ಮೇಲ್ಪಟ್ಟ ಇಳುವರಿ ಹೊಂದಿರುವ ಸಕ್ಕರೆ ಕಾರ್ಖಾನೆಗಳಿಗೆ ಶೇಕಡ 1 ರಷ್ಟು ಇಳುವರಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.290/-ರ ಸರಾಸರಿಯಂತೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ಕಡಿಮೆ ಮಾಡುವುದು
4. ಶೇಕಡ 9.5 ಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.2755/- ಗಳ ನ್ಯಾಯ ಮತ್ತು ಲಾಭದಾಯಕ ಬೆಲೆ.

2020-21ನೇ ಸಾಲಿನಲ್ಲಿ ರಾಜ್ಯದಲ್ಲಿ ಕಾರ್ಯನಿರ್ವಹಿಸಿರುವ 66 ಸಕ್ಕರೆ ಕಾರ್ಖಾನೆಗಳು (ಈ ಪೈಕಿ ಶ್ರೀ. ಸಂಗಂ ಸಹಕಾರಿ ಸಕ್ಕರೆ ಕಾರ್ಖಾನೆ, ಹುಕ್ಕೇರಿ ಮತ್ತು ಶ್ರೀ ಕೇದಾರ್‌ನಾಥ್ ಶುಗರ್ ಅಂಡ್ ಆಗ್ರೋ ಪ್ರಾಡಕ್ಟ್ಸ್ ಲಿ., ಬಾದಾಮಿ ಈ ಕಾರ್ಖಾನೆಗಳು ಪ್ರಾಯೋಗಿಕವಾಗಿ ಕಬ್ಬು ನುರಿಸಿರುತ್ತದೆ.) ಸಲ್ಲಿಸಿದ ಆರ್.ಟಿ 8(ಸಿ) ವರದಿಗಳ ಪ್ರಕಾರ ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯಂತೆ 2021-22ನೇ ಕಬ್ಬು ನುರಿಸುವ ಹಂಗಾಮಿಗೆ ರಾಜ್ಯದ ಸಕ್ಕರೆ ಕಾರ್ಖಾನೆಗಳು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ-2014ರ ಕಲಂ 9(1) ರ ಪ್ರಕಾರ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ಪ್ರಕಟಿಸಲಾಗಿದೆ. ಈ ಕಬ್ಬಿನ ದರವು ಎಫ್.ಆರ್.ಪಿ. ನಿಯಮದಂತೆ ಎಕ್ಸ್-ಗೇಟ್ ದರವಾಗಿರುತ್ತದೆ.

ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಕಾರ್ಖಾನೆವಾರು ನ್ಯಾಯ ಮತ್ತು ಲಾಭದಾಯಕ ಬೆಲೆ (Fair and Remunerative Price) ನಿಗದಿಗೊಳಿಸುವ ಸಂಬಂಧ ಈ ಕೆಳಕಂಡ ಆದೇಶ ಹೊರಡಿಸಿದೆ.

## ಆದೇಶ

ಸಂಖ್ಯೆ: ಡಿಎಸ್‌ಕೆ/ಎಸ್‌ಕೆ/20/2021-22 ದಿನಾಂಕ: 29.10.2021

ಕೇಂದ್ರ ಸರ್ಕಾರವು ಉಲ್ಲೇಖ (1) ರಂತೆ 2021-22ನೇ ಸಕ್ಕರೆ ಹಂಗಾಮಿಗೆ ನಿಗದಿಪಡಿಸಿರುವ ನ್ಯಾಯ ಮತ್ತು ಲಾಭದಾಯಕ ದರದ (Fair and Remunerative Price) ಆಧಾರದ ಮೇಲೆ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ, 2013 ಮತ್ತು ತಿದ್ದುಪಡಿ ಅಧಿನಿಯಮ 2014ರ ಕಲಂ 2(ii)(ಇಎ) ಮತ್ತು 9(1) ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಶಿವಾನಂದ ಹೆಚ್. ಕಲಕೇರಿ, ಭಾ.ರಾ.ಸೇ., ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಆದ ನಾನು 2021-22ನೇ ಸಾಲಿನಲ್ಲಿ ರಾಜ್ಯದಲ್ಲಿ ಕಾರ್ಯ ನಿರ್ವಹಿಸಿರುವ 66 ಸಕ್ಕರೆ ಕಾರ್ಖಾನೆಗಳು ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯನ್ನು ಆಧಾರವಾಗಿಟ್ಟುಕೊಂಡು 2020-21ನೇ ಸಾಲಿಗೆ ರಾಜ್ಯದ ಸಕ್ಕರೆ ಕಾರ್ಖಾನೆಗಳು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2014ರ ಕಲಂ 9(1)ರ ಪ್ರಕಾರ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ಈ ಕೆಳಕಂಡಂತೆ ಅಧಿಕೃತವಾಗಿ ಪ್ರಕಟಿಸುತ್ತೇನೆ. ಈ ಕಬ್ಬಿನ ದರವು ಎಫ್.ಆರ್.ಪಿ. ನಿಯಮದಂತೆ ಎಕ್ಸ್-ಗೇಟ್ ದರವಾಗಿರುತ್ತದೆ. ಈ ಪ್ರಕಟಣೆಯಲ್ಲಿನ ಅಂಕಿ ಅಂಶಗಳು ಕೇಂದ್ರ ಸರ್ಕಾರವು ಕಾರ್ಖಾನೆವಾರು ಹೊರಡಿಸಿರುವ ನ್ಯಾಯ ಮತ್ತು ಲಾಭದಾಯಕ ಬೆಲೆಯ (Fair and Remunerative Price) ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.

| ಕ್ರ. ಸಂ. | ಸಕ್ಕರೆ ಕಾರ್ಖಾನೆಗಳ ಹೆಸರು | 2020-21ನೇ ಸಾಲಿನಲ್ಲಿ (01.07.2020 ರಿಂದ 30.06.2021 ರವರೆಗೆ) | | | 2021-22ನೇ ಸಾಲಿಗೆ ಪ್ರತಿ ಮೆ.ಟನ್ ಕಬ್ಬಿಗೆ ಪಾವತಿಸಬೇಕಾದ ನ್ಯಾಯ ಮತ್ತು ಲಾಭದಾಯಕ ಬೆಲೆ (ಎಫ್‌ಆರ್‌ಪಿ) (ರೂ.ಗಳಲ್ಲಿ) |
|---|---|---|---|---|---|
| | | ನುರಿಸಿದ ಕಬ್ಬಿನ ಪ್ರಮಾಣ (ಮೆ. ಟನ್‌ಗಳಲ್ಲಿ) | ಉತ್ಪಾದಿಸಿದ ಸಕ್ಕರೆ ಪ್ರಮಾಣ (ಮೆ. ಟನ್‌ಗಳಲ್ಲಿ) | ಶೇಕಡ ಇಳುವರಿ (%) | |
| 1 | 2 | 3 | 4 | 5 | 6 |
| | ಬೆಳಗಾವಿ ಜಿಲ್ಲೆ | | | | |
| 1 | ಅಥಣಿ ಶುಗರ್ಸ್ ಲಿ., ವಿಷ್ಣು ಅಣ್ಣಾನಗರ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ. | 1382419 | 152067 | 11.00 | 3190 |
| 2 | ಲೈಲಾ ಶುಗರ್ಸ್ ಲಿ., (ಗುತ್ತಿಗೆದಾರರು-ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ.,) ಕುಪ್ಪಟಗಿರಿ, ಖಾನಾಪುರ ತಾಲ್ಲೂಕು, ಬೆಳಗಾವಿ ಜಿಲ್ಲೆ. | 300107 | 34572 | 11.52 | 3341 |

| 1 | 2 | 3 | 4 | 5 | 6 |
|---|---|---|---|---|---|
| 3 | ಚಿದಾನಂದ ಬಸಪ್ರಭು ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆ ನಿ. (ಘೂಡ್‌ಗಂಗಾ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ), ಚಿಕ್ಕೋಡಿ, ಬೆಳಗಾವಿ ಜಿಲ್ಲೆ | 1014714 | 113170 | 11.53 | 3344 |
| 4 | ಇ.ಐ.ಡಿ ಪ್ಯಾರಿ (ಇಂಡಿಯಾ) ಲಿ, (ಗುತ್ತಿಗೆದಾರರು ಧನಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ.) ಖಾನ್‌ಪೇಟ್, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ. | 535843 | 61986 | 11.80 | 3422 |
| 5 | ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಸಂಗನಕೇರಿ, ಗೋಕಾಕ್ ತಾಲ್ಲೂಕು, ಬೆಳಗಾವಿ ಜಿಲ್ಲೆ | 271423 | 28709 | 10.58 | 3068 |
| 6 | ಗೋಕಾಕ್ ಶುಗರ್ಸ್, ಕೊಳವಿ, ಗೋಕಾಕ್ ತಾಲ್ಲೂಕು, ಬೆಳಗಾವಿ ಜಿಲ್ಲೆ | 466687 | 53576 | 11.48 | 3329 |
| 7 | ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ನಿಪ್ಪಾಣಿ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ. | 434710 | 51509 | 11.85 | 3437 |
| 8 | ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಸಂಕೇಶ್ವರ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 740065 | 82510 | 11.15 | 3234 |
| 9 | ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಳಿಯಾಳ, ಅಥಣಿ ತಾಲ್ಲೂಕು, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 557993 | 60807 | 10.90 | 3161 |
| 10 | ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ. ಹುಬ್ಬಳ್ಳಿ, ಬೈಲಹೊಂಗಲ ತಾಲ್ಲೂಕು, ಬೆಳಗಾವಿ ಜಿಲ್ಲೆ | 261861 | 27889 | 10.65 | 3089 |
| 11 | ರೇಣುಕಾ ಶುಗರ್ಸ್ ಲಿ., (ಗುತ್ತಿಗೆದಾರರು–ರಾಯಬಾಗ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ.,) ಮೇಕಳಿ, ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ. | 301952 | 31822 | 11.58 | 3358 |
| 12 | ರೇಣುಕಾ ಶುಗರ್ಸ್, ಬುರ್ಲಟ್ಟಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 1175611 | 68149 | 11.22 | 3254 |
| 13 | ರೇಣುಕಾ ಶುಗರ್ಸ್, ಮುನೋಳಿ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 1051173 | 98679 | 11.95 | 3466 |
| 14 | ಸತೀಶ್ ಶುಗರ್ಸ್ ಲಿ., ಹುಣಶ್ಯಾಳ. ಗೋಕಾಕ್ ತಾಲ್ಲೂಕು. ಬೆಳಗಾವಿ ಜಿಲ್ಲೆ | 1366495 | 151711 | 11.10 | 3219 |

| 1 | 2 | 3 | 4 | 5 | 6 |
|---|---|---|---|---|---|
| 15 | ಶಿರಗುಪ್ಪಿ ಶುಗರ್ ವರ್ಕ್ಸ್ ಲಿ., ಕಾಗವಾಡ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 704567 | 84697 | 12.02 | 3486 |
| 16 | ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಸಿದ್ದಸಮುದ್ರ, ಬೈಲಹೊಂಗಲ ತಾಲ್ಲೂಕು, ಬೆಳಗಾವಿ ಜಿಲ್ಲೆ | 282634 | 31722 | 11.22 | 3254 |
| 17 | ಶಿವಶಕ್ತಿ ಶುಗರ್ಸ್ ಲಿ., ಸೌದತ್ತಿ, ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ | 1338870 | 140472 | 11.50 | 3335 |
| 18 | ಉಗಾರ್ ಶುಗರ್ಸ್ ವರ್ಕ್ಸ್ ಲಿ, ಉಗಾರ್‌ಖುರ್ದ್, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 1947054 | 226515 | 11.56 | 3352 |
| 19 | ವೆಂಕಟೇಶ್ವರ ಪವರ್ ಪ್ರಾಜೆಕ್ಟ್ ಲಿ., ಬೇಡ್ಕಿಹಾಳ್, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 981269 | 120697 | 12.30 | 3567 |
| 20 | ವಿಶ್ವರಾಜ್ ಶುಗರ್ ಇಂಡಸ್ಟ್ರೀಸ್ ಲಿ, ಬೆಲ್ಲದ ಬಾಗೇವಾಡಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 908955 | 79320 | 11.70 | 3393 |
| 21 | ಸೌಭಾಗ್ಯಲಕ್ಷ್ಮಿ ಶುಗರ್ಸ್, ಹಿರೇನಂದಿ, ಗೋಕಾಕ್ ತಾಲ್ಲೂಕು, ಬೆಳಗಾವಿ ಜಿಲ್ಲೆ | 337885 | 37375 | 11.06 | 3207 |
| 22 | ಬೆಳಗಾಂ ಶುಗರ್ಸ್ ಪ್ರೈ. ಲಿ., ಹುದಲಿ, ಬೆಳಗಾವಿ ತಾಲ್ಲೂಕು & ಜಿಲ್ಲೆ | 586547 | 65995 | 11.25 | 3263 |
| 23 | ಹರ್ಷ ಶುಗರ್ಸ್ ಲಿ., ಸೌದತ್ತಿ, ಸೌದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 602616 | 65866 | 10.93 | 3170 |
| 24 | ಅರಿಹಂತ್ ಶುಗರ್ಸ್ ಲಿ, ಜೈನಾಪುರ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 330236 | 39683 | 12.02 | 3486 |
| 25 | ಮಾರ್ಕಂಡೇಯ ಸಹಕಾರಿ ಸಕ್ಕರೆ ಕಾರ್ಖಾನೆ ನಿ, ಕಾಕತಿ, ಬೆಳಗಾವಿ ಜಿಲ್ಲೆ | 121172 | 12687 | 10.47 | 3036 |
| 26 | ಶ್ರೀ ಸಂಗಂ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಿಡಕಲ್ ಡ್ಯಾಂ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ | 122569 | 13846 | 11.30 | 3277 |
| | ಬಾಗಲಕೋಟೆ ಜಿಲ್ಲೆ | | | | |
| 27 | ಬೀಳಗಿ ಶುಗರ್ಸ್ ಲಿ., ಬಡಗಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | 957716 | 101961 | 10.65 | 3089 |
| 28 | ಜೆಮ್ಸ್ ಶುಗರ್ಸ್ ಲಿ., ಕುಂದರಗಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | 577758 | 52003 | 10.81 | 3135 |

| 1 | 2 | 3 | 4 | 5 | 6 |
|---|---|---|---|---|---|
| 29 | ಗೋದಾವರಿ ಶುಗರ್ಸ್ ಲಿ., ಸಮೀರವಾಡಿ, ಮುಧೋಳ್ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | 2002849 | 147601 | 11.40 | 3306 |
| 30 | ಇಂಡಿಯನ್ ಕೇನ್ ಪವರ್ ಲಿ., ಉತ್ತೂರ್, ಮುಧೋಳ್ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | 2014850 | 222487 | 11.04 | 3202 |
| 31 | ಜಮಖಂಡಿ ಶುಗರ್ಸ್ ಲಿ., ಹಿರೇಪಡಸಲಗಿ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | 671946 | 55332 | 11.44 | 3318 |
| 32 | ನಿರಾಣಿ ಶುಗರ್ಸ್ ಲಿ, ಮುಧೋಳ್, ಬಾಗಲಕೋಟೆ ಜಿಲ್ಲೆ | 1758542 | 167965 | 11.10 | 3219 |
| 33 | ಪ್ರಭುಲಿಂಗೇಶ್ವರ ಶುಗರ್ಸ್ ಲಿ., ಸಿದ್ದಾಪುರ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | 1176815 | 118750 | 11.47 | 3326 |
| 34 | ಇ.ಐ.ಡಿ. ಪ್ಯಾರಿ (ಇಂಡಿಯಾ) ಲಿ, ನಾಯಿನೇಗಿಲಿ, ಬಾಗಲಕೋಟೆ ತಾಲ್ಲೂಕು ಮತ್ತು ಜಿಲ್ಲೆ | 520689 | 56641 | 11.13 | 3228 |
| 35 | ಶ್ರೀ ಸಾಯಿ ಪ್ರಿಯಾ ಶುಗರ್ಸ್ ಲಿ., ಹಿಪ್ಪರಗಿ, ಮೈಗೂರು, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ, | 1444120 | 105074 | 11.20 | 3248 |
| 36 | ಎಂಆರ್‌ಎನ್ ಕೇನ್ ಪವರ್ ಲಿ., ಕಲ್ಲಾಪುರ, ಬಾಗಲಕೋಟೆ ಜಿಲ್ಲೆ | 523063 | 50740 | 10.93 | 3170 |
| 37 | ಶ್ರೀ ಕೇದಾರನಾಥ್ ಶುಗರ್ ಅಂಡ್ ಆಗ್ರೋ ಪ್ರಾಡಕ್ಟ್ಸ್ ಲಿ., ಕೆರಕಲಮಟ್ಟಿ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | 96452 | 10345 | 11.92 | 3457 |
| | ಬಳ್ಳಾರಿ ಜಿಲ್ಲೆ | | | | |
| 38 | ಶ್ಯಾಮನೂರು ಶುಗರ್ಸ್ ಲಿ., ದುಗ್ಗಾವತಿ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ | 322297 | 18903 | 8.81 | 2755 |
| 39 | ಮೈಲಾರ ಶುಗರ್ಸ್ ಲಿ., ಬಿರಬ್ಬಿ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ | 380202 | 36955 | 9.72 | 2819 |
| | ಬೀದರ್ ಜಿಲ್ಲೆ | | | | |
| 40 | ಮಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಿಂಚಿಕ್‌ಮತ್, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ | 323232 | 26182 | 8.10 | 2755 |
| 41 | ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ, ಇಮಾಂಪುರ, ಬೀದರ್ ತಾಲ್ಲೂಕು ಮತ್ತು ಜಿಲ್ಲೆ | 252741 | 22999 | 9.10 | 2755 |
| 42 | ಭಾಲ್ಕೇಶ್ವರ ಶುಗರ್ಸ್ ಲಿ., ಬಾಜೋಳಗಾ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ | 421680 | 26611 | 9.44 | 2755 |

| 1 | 2 | 3 | 4 | 5 | 6 |
|---|---|---|---|---|---|
| 43 | ಬೀದರ್ ಕಿಸಾನ್ ಸಕ್ಕರ್ ಕಾರ್ಖಾನಾ ಲಿ, ಮೊಗದಾಳ್, ಬೀದರ್ ತಾಲ್ಲೂಕು ಮತ್ತು ಜಿಲ್ಲೆ. | 222020 | 19745 | 8.90 | 2755 |
| | ಚಾಮರಾಜನಗರ ಜಿಲ್ಲೆ | | | | |
| 44 | ಬನ್ನಾರಿ ಅಮ್ಮನ್ ಶುಗರ್ಸ್ ಲಿ, ಕುಂತೂರು, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ | 743682 | 75842 | 10.19 | 2955 |
| | ದಾವಣಗೆರೆ ಜಿಲ್ಲೆ | | | | |
| 45 | ದಾವಣಗೆರೆ ಶುಗರ್ಸ್ ಲಿ., ಕುಕ್ಕವಾಡ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ | 331713 | 31446 | 9.48 | 2755 |
| | ಗದಗ್ ಜಿಲ್ಲೆ | | | | |
| 46 | ವಿಜಯನಗರ ಶುಗರ್ಸ್ ಲಿ., (ಗುತ್ತಿಗೆದಾರರು- ಮೃಢಗಿರಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ.,) ಗಂಗಾಪುರ, ಮುಂಡರಗಿ, ತಾಲ್ಲೂಕು, ಗದಗ್ ಜಿಲ್ಲೆ | 577020 | 47839 | 8.29 | 2755 |
| | ಹಾಸನ ಜಿಲ್ಲೆ | | | | |
| 47 | ಚಾಮುಂಡೇಶ್ವರಿ ಶುಗರ್ಸ್ ಲಿ., (ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು), ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ | 70273 | 5322 | 7.57 | 2755 |
| | ಹಾವೇರಿ ಜಿಲ್ಲೆ | | | | |
| 48 | ಜಿಎಂ ಶುಗರ್ಸ್ ಲಿ., (ಗುತ್ತಿಗೆದಾರರು-ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿ.,) ಸಂಗೂರು, ಹಾವೇರಿ ತಾಲ್ಲೂಕು ಮತ್ತು ಹಾವೇರಿ ಜಿಲ್ಲೆ. | 413851 | 39075 | 9.44 | 2755 |
| | ಕಲಬುರಗಿ ಜಿಲ್ಲೆ | | | | |
| 49 | ಎನ್ಎಸ್ಎಲ್ ಶುಗರ್ಸ್ ಲಿ., (ಗುತ್ತಿಗೆದಾರರು-ಸಹಕಾರಿ ಸಕ್ಕರೆ ಕಾರ್ಖಾನೆ ನಿ.,) ಭೂಸನೂರು, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ. | 418037 | 42023 | 10.05 | 2915 |
| 50 | ರೇಣುಕಾ ಶುಗರ್ಸ್, ಹವಳಗ, ಅಫ್ಜಲ್‌ಪುರ ತಾಲ್ಲೂಕು, ಕಲಬುರಗಿ ಜಿಲ್ಲೆ. | 612982 | 30760 | 10.22 | 2964 |
| 51 | ಉಗಾರ್ ಶುಗರ್ಸ್ ವರ್ಕ್ಸ್ ಲಿ., ನಾಗರಹಳ್ಳಿ, ಜೇವರ್ಗಿ ತಾಲ್ಲೂಕು, ಕಲಬುರಗಿ ಜಿಲ್ಲೆ | 340076 | 37674 | 10.72 | 3109 |

| 1 | 2 | 3 | 4 | 5 | 6 |
|---|---|---|---|---|---|
| | **ಮಂಡ್ಯ ಜಿಲ್ಲೆ** | | | | |
| 52 | ಚಾಮುಂಡೇಶ್ವರಿ ಶುಗರ್ಸ್ ಲಿ. ಭಾರತಿ ನಗರ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ | 781682 | 74672 | 9.55 | 2770 |
| 53 | ಕೋರಮಂಡಲ್ ಶುಗರ್ಸ್ ಲಿ., ಮಾಕವಳ್ಳಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ. | 656850 | 62797 | 9.56 | 2772 |
| 54 | ಎನ್‌ಎಸ್‌ಎಲ್ ಶುಗರ್ಸ್, ಕೊಪ್ಪ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ | 993337 | 89082 | 9.24 | 2755 |
| 55 | ಎಂಆರ್‌ಎನ್ ಕೇನ್ ಪವರ್ ಅಂಡ್ ಬಯೋರಿಫೈನರೀಸ್ ಪ್ರೈ. ಲಿ., (ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ - ಗುತ್ತಿಗೆದಾರರು), ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ | 158973 | 13211 | 8.31 | 2755 |
| | **ಮೈಸೂರು ಜಿಲ್ಲೆ** | | | | |
| 56 | ಬನ್ನಾರಿ ಅಮ್ಮನ್ ಶುಗರ್ಸ್ ಲಿ, ಅಲಗಂಚಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ | 1109450 | 107965 | 9.72 | 2819 |
| | **ಉತ್ತರ ಕನ್ನಡ ಜಿಲ್ಲೆ** | | | | |
| 57 | ಇ.ಐ.ಡಿ. ಪ್ಯಾರಿ (ಇಂಡಿಯಾ) ಲಿ., ಹುಲ್ಲಟ್ಟಿ, ಹಳಿಯಾಳ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ | 869944 | 99824 | 12.02 | 3486 |
| | **ವಿಜಯಪುರ ಜಿಲ್ಲೆ** | | | | |
| 58 | ಇಂಡಿಯನ್ ಶುಗರ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಲಿ., ಹಾವಿನಾಳ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ | 297562 | 26515 | 8.91 | 2755 |
| 59 | ಜಮಖಂಡಿ ಶುಗರ್ಸ್ ಲಿ., (ಘಟಕ–2) ನಾದ್ ಕೆ.ಡಿ. ಇಂಡಿ ತಾಲ್ಲೂಕು ವಿಜಯಪುರ ಜಿಲ್ಲೆ | 440812 | 45411 | 10.68 | 3097 |
| 60 | ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕೃಷ್ಣಾನಗರ, ವಿಜಯಪುರ ತಾಲ್ಲೂಕು ಮತ್ತು ಜಿಲ್ಲೆ | 647565 | 62893 | 11.28 | 3271 |
| 61 | ಕೆ.ಪಿ.ಆರ್. ಶುಗರ್ ಮಿಲ್ಸ್, ಅಲಮೇಲು ಗ್ರಾಮ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ | 1074346 | 85423 | 10.31 | 2990 |
| 62 | ಮನಾಲಿ ಶುಗರ್ಸ್ ಲಿ., ಮಲಘಾಣ್, ಸಿಂದಗಿ ತಾಲ್ಲೂಕು, ವಿಜಯಪುರ ಜಿಲ್ಲೆ | 326740 | 28718 | 8.79 | 2755 |
| 63 | ಶ್ರೀ ಬಸವೇಶ್ವರ ಶುಗರ್ಸ್ ಲಿ., ಕಾರಜೋಳ್, ಬಸವನಬಾಗೇವಾಡಿ ತಾಲ್ಲೂಕು, ವಿಜಯಪುರ ಜಿಲ್ಲೆ | 575379 | 62949 | 10.94 | 3173 |

| 1 | 2 | 3 | 4 | 5 | 6 |
|---|---|---|---|---|---|
| 64 | ಶ್ರೀ ಬಾಲಾಜಿ ಶುಗರ್ಸ್ & ಕೆಮಿಕಲ್ಸ್ ಪ್ರೈ.ಲಿ, ಯರನಲ್, ಮುದ್ದೇಬಿಹಾಳ್ ತಾಲ್ಲೂಕು, ವಿಜಯಪುರ ಜಿಲ್ಲೆ | 656954 | 70268 | 10.70 | 3103 |
| 65 | ಶ್ರೀ ಭೀಮಶಂಕರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಮರಗೂರು, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ. | 403501 | 41738 | 10.34 | 2999 |
| | ಯಾದಗಿರಿ ಜಿಲ್ಲೆ | | | | |
| 66 | ಕೋರ್‌ಗ್ರೀನ್ ಶುಗರ್ಸ್ ಲಿ., ತುಮಕೂರು, ಶಹಪುರ ತಾಲ್ಲೂಕು, ಯಾದಗಿರಿ ಜಿಲ್ಲೆ | 342880 | 25888 | 10.09 | 2926 |

ಈ ಆದೇಶವನ್ನು ನನ್ನ ಹಸ್ತಾಕ್ಷರ ಮತ್ತು ಕಛೇರಿ ಮೊಹರಿನೊಂದಿಗೆ ದಿನಾಂಕ 29.10.2021 ರಂದು ಹೊರಡಿಸಿರುತ್ತೇನೆ.

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು

ಇವರಿಗೆ:
ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳ
ವ್ಯವಸ್ಥಾಪಕ ನಿರ್ದೇಶಕರು/
ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.

ಪ್ರತಿಯನ್ನು:
1) ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಜಿಲ್ಲಾಧಿಕಾರಿಗಳು, ಬೆಳಗಾವಿ/ ಬಾಗಲಕೋಟೆ/ ವಿಜಯಪುರ/ ಉತ್ತರ ಕನ್ನಡ/ ಗದಗ/ ಹಾವೇರಿ/ ಬೀದರ್/ ಕಲಬುರಗಿ/ ಯಾದಗಿರಿ/ ದಾವಣಗೆರೆ/ ಬಳ್ಳಾರಿ/ ಮಂಡ್ಯ/ ಮೈಸೂರು/ ಚಾಮರಾಜನಗರ ಇವರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.